# GENERATION Y

**ಸಂಜು** ಹಿಂದಿ ಸಿನಿಮಾದ ಕಥೆ ನಟ ಸಂಜಯ್ ದತ್ ಖಾಸಗಿ ಬದುಕನ್ನು ಆಧರಿಸಿದೆ. ಮುನ್ನೂರಕ್ಕೂ ಹೆಚ್ಚು ಹೆಣ್ಣುಗಳ ಜತೆ ಮಲಗಿದ, ಅಕ್ರಮವಾಗಿ ಸಿಗುತ್ತಿದ್ದ ಎಲ್ಲ ಮಾದಕವಸ್ತುಗಳಿಗೂ ದಾಸನಾಗಿದ್ದ, ಅಶಿಸ್ತನ್ನೇ ಹಾಸಿ ಹೊದ್ದಿದ್ದ, ಧಾರಾಳಿ ಸ್ನೇಹಿತನ ಬೆನ್ನಿಗೂ ಚೂರಿ ಹಾಕಬಲ್ಲವನಾಗಿದ್ದ ಸಂಜಯ್ ದತ್ ಒಂದು ರೀತಿಯಲ್ಲಿ ದಿಕ್ಕೆಟ್ಟಂತೆ ಕಾಣುವ ಹೊಸಕಾಲದ ಯುವಕರ ಪ್ರತಿನಿಧಿ. ಚಾರಿತ್ರ್ಯದಲ್ಲಿ ಓರೆಕೋರೆಗಳಿದ್ದರೂ ಸಂಜಯ್ ಕುಟುಂಬದ ಮನುಷ್ಯ. ಆತನಿಗೆ ತಾಯಿಯೆಂದರೆ ಇಷ್ಟ. ತಂದೆ ಆತ್ಮೀಯ. ಮಗನ ಎಲ್ಲ ಹಳವಂಡಗಳನ್ನೂ ಸಹಿಸಿಕೊಂಡೂ ಕ್ಯಾನ್ಸರ್ ಬೀಸಿಗೆ ಸಿಲುಕಿ ಅಸುನೀಗುವ ತಾಯಿಯ ಮಮಕಾರ ಯಾರಿಗೆ ತಾನೆ ಇಷ್ಟವಾಗುವುದಿಲ್ಲ. ಚಟಗಳ ಮೂಟೆಯಂಥ ಮಗನಿಗೆ ಎದೆಮೇಲೆ ಕೈಯಾಡಿಸುತ್ತ ಆತ್ಮವಿಶ್ವಾಸದ ಗೀತೆಯ ಪಠಣ ಮಾಡುವ, ಕಪ್ಪು ಗುಣಗಳ ನಾಯಕನಿಗೆ ಬಿಳಿ ಗುಣಗಳ ಉಣಬಡಿಸುವಂಥ ತಂದೆಯನ್ನು ಯಾರು ತಾನೆ ಹಂಬಲಿಸುವುದಿಲ್ಲ. ನೋಡುವವರಿಗೆ ಕಪ್ಪು ಗುಣಗಳ ನಾಯಕನೇ ಇಷ್ಟ. ಬಿಳಿ ಗುಣಗಳ ತಂದೆ ಅಯ್ಯೋ ಪಾಪ.

ನಿರ್ದೇಶಕ ರಾಜ್‌ಕುಮಾರ್ ಹಿರಾನಿ ಪಥ ಬಿಟ್ಟು ಹೋಗುವಂತೆ ನಟಿಸುತ್ತಾ ತೋರಿಸುವ ಸಿನಿಮಾಗಳು ಹೊಸ ತಲೆಮಾರಿನವರನ್ನು ಅದರಲ್ಲೂ ಮಿಲೇನಿಯಲ್‌ಗಳನ್ನು ಹಿಡಿದಿಟ್ಟುಕೊಳ್ಳುತ್ತಾ ಬಂದಿವೆ. 1982ರಿಂದ 2004ರ ಅವಧಿಯಲ್ಲಿ ಹುಟ್ಟಿದವರೇ ಮಿಲೇನಿಯಲ್‌ಗಳು. ಕನ್ನಡದಲ್ಲಿ 'ಸಹಸ್ರಮಾನಿಗಳು' ಎಂದು ಹೇಳಬಹುದೇನೋ. ಇಂಥವರನ್ನು ಚಿತ್ರಮಂದಿರಕ್ಕೆ ಬರುವಂತೆ ಮಾಡಿಬಿಟ್ಟರೆ ಅಪ್ಪ, ಅಮ್ಮ, ತಾತ, ಅಜ್ಜಿ, ಅಂಕಲ್, ಆಂಟಿಗಳೆಲ್ಲ ತಂತಾವೇ ಬಂದುಬಿಡುತ್ತಾರೆ ಎನ್ನುವುದು ಸಾಬೀತಾಗಿರುವ ಲೆಕ್ಕಾಚಾರ.

ಸಿನಿಮಾ ಮಾತ್ರವಲ್ಲ; ಸಹಸ್ರಮಾನಿಗಳನ್ನು ನೆಚ್ಚಿಕೊಂಡೇ ದೇಸಿ ಮಾರುಕಟ್ಟೆಯೂ ಬೆಳೆದಿದೆ. ಬ್ರಾಂಡೆಂಡ್ ವಸ್ತುಗಳು, ಮಾಲ್ ಸಂಸ್ಕೃತಿ, ಪಬ್ ಸಂಸ್ಕೃತಿ, ಚಾರಣ, ಪ್ರವಾಸ, ಸಾಹಸಿ ಕ್ರೀಡೆಗಳು, ಇಷ್ಟವಾದದ್ದನ್ನೇ ವೃತ್ತಿಯನ್ನಾಗಿಸಿಕೊಳ್ಳುವ



**ಏನೆಲ್ಲಾ ಹಳವಂಡಗಳಿಗೆ ಸಿಲುಕಿಕೊಂಡರೂ ಸಹಸ್ರಮಾನಿಗಳ ಪಾಲಿಗೆ ಬಾಲಿವುಡ್ ನಟ ಸಂಜಯ್ ದತ್ ಚುಂಬಕ ಕೇಂದ್ರವಾಗಿಯೇ ಉಳಿದಿದ್ದಾನೆ.**

